**PW.02**

ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.

**1 ನೇ ಆರೋಪಿತಮ ಪರ ವಕೀಲರಿಂದ ಪಾಟಿ ಸವಾಲು:-**

ನಾವು ನಮ್ಮ ಹಿರಿಯರ ಕಾಲದಿಂದ ಪತ್ತಾರಕಿ ಮತ್ತು ಜ್ಯೂವೆಲರಿ ಅಂಗಡಿ ನಡೆಸುತ್ತಾ ಬಂದಿರುತ್ತೇವೆ. ನಾನು ಹುಮನಾಬಾದ ಪೊಲೀಸ ಠಾಣೆಯ ಖಾಯಂ ಪಂಚ ಅಂತಾ ಅನ್ನುವುದು ಸರಿ ಅಲ್ಲಾ. ನಮ್ಮ ಅಂಗಡಿಯಲ್ಲಿ ಇಬ್ಬರು ಪತ್ತಾರಕಿ ಕೆಲಸ ಮಾಡುತ್ತಾರೆ. ನನಗೆ ಪೊಲೀಸರು ನೋಟಿಸು ಕೊಟ್ಟು ಕರೆಸಿರಲಿಲ್ಲಾ ಕೇವಲ ಫೋನ್ ಮಾಡಿ ಕರೆಸಿದ್ದರು. ನನಗೆ ಆವಾಗಾವಾಗ ಪೊಲೀಸ ಠಾಣೆಗೆ ಕರೆಸುತ್ತಾರೆ ಅಂತಾ ಅನ್ನುವುದು ಸರಿ ಅಲ್ಲಾ. ಪೊಲೀಸ ಠಾಣೆಯಿಂದ ಘಟನಾ ಸ್ಥಳ ಅಂದಾಜು ಒಂದುವರೆ ಕಿ.ಮೀ. ದೂರ ಇರುತ್ತದೆ. ಘಟನಾ ಸ್ಥಳದ ಹತ್ತಿರ ಮೂರು ಹೈವೇ ರಸ್ತೆ ಕೂಡುವ ರಸ್ತೆ ಇರುತ್ತದೆ ಅಂತಾ ಅನ್ನುವುದು ನಿಜ. ಅಲ್ಲಿ ಯಾವಾಗಲೂ ವಾಹನಗಳ ಓಡಾಟ ಜಾಸ್ತಿ ಇರುತ್ತದೆ ಅಂತಾ ಅನ್ನುವುದು ನಿಜ. ನಾವು ಅಲ್ಲಿ ಬೇರೆ ಯಾವುದೇ ವಾಹನಗಳನ್ನು ನಿಲ್ಲಿಸಿ ಚೆಕ್ ಮಾಡಲಿಲ್ಲಾ. ಚಾ.ಸಾ. 1 ಮತ್ತು ಅವರ ಜೊತೆ ಬಂದ ಮೂರು ಜನರು ಸಮವಸ್ತ್ರದಲ್ಲಿ ಇದ್ದರು. ಅವರಲ್ಲಿ ರೈಟರ್, ಫೋಟೋಗ್ರಾಫರ್ ಇದ್ದರು. ನನಗೆ ಚಾ.ಸಾ. 1 ಇವರು ಅಲ್ಲಿಗೆ ಬಂದಿರುವ ಎಲ್ಲರ ಪರಿಚಯ ಮಾಡಿಕೊಟ್ಟಿರುವುದಿಲ್ಲಾ. ಘಟನಾ ಸ್ಥಳದಿಂದ ಮುಂಬೈಗೆ ಹೋಗುವ ರಸ್ತೆ ನೇರವಾಗಿ ಕಣ್ಣಿಗೆ ಕಾಣುತ್ತದೆ ಅಂತಾ ಅನ್ನುವುದು ನಿಜ. ಜಪ್ತ ಮಾಡಿಕೊಂಡ ಕಾರು ಘಟನಾ ಸ್ಥಳದಿಂದ 100 ಮೀಟರ್ ಅಂತರದಲ್ಲಿ ಬರುವಾಗ ನಾನು ನೋಡಿದೆನು. ನಾನು ಮತ್ತು ಪೊಲೀಸರು ಎಲ್ಲರೂ ಹೈವೇ ರಸ್ತೆಯ ಮೇಲೆ ನಿಂತುಕೊಂಡಿದ್ದೆವು. ಪೊಲೀಸರನ್ನು ನೋಡಿ ಸದರಿ ಕಾರ ಚಾಲಕ ಕಾರನ್ನು ತಿರುಗಿಸಿ ಪರಾರಿಯಾಗಲು ಪ್ರಯತ್ನಿಸಿರಲಿಲ್ಲಾ. ಸದರಿ ಕಾರಿನ ಹಿಂದೆ ಬೇರೆ ಯಾವ ವಾಹನಗಳು

ಬರುತ್ತಿರಲಿಲ್ಲಾ. ಘಟನಾ ಸ್ಥಳದಲ್ಲಿ ಸುಮಾರು ಒಂದುವರೆಗಳ ಕಾಲ ಇದ್ದೆವು, ನಂತರ ಅಲ್ಲಿಂದ ಪೊಲೀಸ ಠಾಣೆಯಲ್ಲಿ ಬಂದೆವು ಮತ್ತು ಪೊಲೀಸ ಠಾಣೆಯಲ್ಲಿ ಬರವಣಿಗೆಯನ್ನು ಮಾಡಿದರು. ಕಾರಿನ ಡಿಕ್ಕಿಯಲ್ಲಿ ಒಂದು ಬ್ಯಾಗ್ ಹೊರತುಪಡಿಸಿ ಬೇರೆ ಯಾವುದೇ ವಸ್ತುಗಳು ಇರಲಿಲ್ಲಾ. ಸದರಿ ಬ್ಯಾಗಿಗೆ ಚೈನ್ ಅಳವಡಿಸಲಾಗಿತ್ತು ಮತ್ತು ಆ ಬ್ಯಾಗ್ ಪ್ಯಾಕ್ ಮಾಡಿರಲಿಲ್ಲಾ. ಸದರಿ ಬ್ಯಾಗಿನ ಚೈನ್ ತೆಗೆದು ನೋಡಿದಾಗ ಒಳಗಡೆ ಸ್ವಯಂ ಲಾಕ್ ಆಗುವಂತಹ ಎರಡು ಪ್ಲಾಸ್ಟಿಕ್ ಚೀಲಗಳು ಇದ್ದವು. ಸದರಿ ಕಾರನ್ನು ತಪಾಸಿಸಿದರೂ ಬೇರೆ ಏನೂ ಸಿಕ್ಕಿರಲಿಲ್ಲಾ. ಆರೋಪಿತರ ಅಂಗ ಶೋಧನೆ ಮಾಡಿದಾಗ ಅವರಿಂದ ಯಾವುದೇ ಹಣ ಮತ್ತು ಇತರೇ ವಸ್ತುಗಳು ಸಿಕ್ಕಿರಲಿಲ್ಲಾ. ನಾವು ಜುವೇಲರಿ ಶಾಪಿನಲ್ಲಿ ತೂಕ ಮಾಡುವ ಎಲೆಕ್ಟ್ರಾನಿಕ್ ತೂಕದ ಯಂತ್ರ ತೆಗೆದುಕೊಂಡು ಹೋಗಿದ್ದೆನು. ಸದರಿ ತೂಕದ ಯಂತ್ರದ ಮುಖಾಂತರ 1 ಗ್ರಾಂ. ದಿಂದ 300 ಗ್ರಾಂ. ವರೆಗೆ ವಸ್ತುಗಳನ್ನು ತೂಕ ಮಾಡಬಹುದಾಗಿತ್ತು. ನಾನು ಜಪ್ತಾದ ಗಾಂಜಾದ ಎರಡು ಪಾಕೇಟಗಳಿಂದ ಐದೈದು ಗ್ರಾಂ.ಗಳಷ್ಟು ಪ್ಲಾಸ್ಟಿಕ್ ಕವರಿನಲ್ಲಿ ಹಾಕಿ ಕವರ ಸಮೇತ ತೂಕ ಮಾಡಿದ್ದೇನೆ. ಅಂದರೆ ಪ್ಲಾಸ್ಟಿಕ್ ಕವರ ಸೇರಿದಂತೆ 5 ಗ್ರಾಂ. ತೂಕವುಳ್ಳದ್ದು ಸ್ಯಾಂಪಲ್ ಇರುತ್ತದೆ. ಜಪ್ತಾದ ಎರಡು ಪಾಕೇಟಗಳಿಂದ ಸ್ಯಾಂಪಲ್ ತೆಗೆದುಕೊಂಡ ನಂತರ ಪುನಃ ಸದರಿ ಎರಡು ದೊಡ್ಡ ಪಾಕೇಟಗಳ ತೂಕ ಮಾಡಿರುವುದಿಲ್ಲಾ. ಸ್ಯಾಂಪಲ್ ಪಡೆಯಲು ಸಣ್ಣ ಸಣ್ಣ ಪಾಕೇಟ ನಾನೇ ನನ್ನ ಜೊತೆ ಒಯ್ದಿದ್ದೆನು. ಅವುಗಳನ್ನು ನನ್ನ ಜೊತೆ ತರುವಂತೆ ಪೊಲೀಸರು ನನಗೆ ಹೇಳಿರುವುದಿಲ್ಲಾ. ಸ್ಯಾಂಪಲ್ ಪಾಕೇಟ ಪ್ಯಾಕ್ ಮಾಡಿದ ನಂತರ ಅದರ ಮೇಲೆ ನಾನು ನನ್ನ ಸಹಿ ಮಾಡಿರುವುದಿಲ್ಲಾ. ನಾನು ಜಪ್ತಾದ ರೆಗ್ಜೀನ್ ಬ್ಯಾಗ್ ಮತ್ತು ಅದರಲ್ಲಿದ್ದ ಎರಡು ಪಾಕೇಟ್ ಸಮೇತ ತೂಕ ಮಾಡಿರುವುದಿಲ್ಲಾ. ನಾನು ನಿಶಾನೆ ಪಿ. 3 ಪಂಚನಾಮೆ ಮೇಲೆ ಪೊಲೀಸ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ನಿಶಾನೆ

ಪಿ. 1 ಫೋಟೋಗಳಲ್ಲಿ ಹೈವೇ ರಸ್ತೆ ಕಾಣುತಿಲ್ಲಾ ಅಂತಾ ಅನ್ನುವುದು ನಿಜ. ಸದರಿ ಬಲೆನೋ ಕಾರಿನಲ್ಲಿ ಆರ್.ಸಿ. ಪುಸ್ತಕ, ಇನ್ಸೂರೆನ್ಸ ವಗೈರೆ ಕಂಡು ಬಂದಿರುವುದಿಲ್ಲಾ. ನಿಶಾನೆ ಪಿ. 1 ಫೋಟೋಗಳಲ್ಲ ಕಾಣುವ ವ್ಯಕ್ತಿಗಳ ಹೆಸರು ನನಗೆ ಹೇಳಲು ಬರುವುದಿಲ್ಲಾ ಅಂತಾ ಅನ್ನುವುದು ಸರಿ ಅಲ್ಲಾ. ನಾನು ಸದರಿ ವ್ಯಕ್ತಿಗಳ ಜೊತೆ ಮಾತನಾಡಿರುವುದಿಲ್ಲಾ. ನನಗೆ ಯಾವಾಗಲೂ ಪೊಲೀಸರು ಠಾಣೆಗೆ ಕರೆಯಿಸಿ ಬರೆದಿಟ್ಟ ಪಂಚನಾಮೆಗಳ ಮೇಲೆ ಠಾಣೆಯಲ್ಲಿ ಸಹಿ ಪಡೆಯುವ ರೂಢಿ ಬೆಳೆಸಿಕೊಂಡಿದ್ದಾರೆ ಅಂತಾ ಅನ್ನುವುದು ಸರಿ ಅಲ್ಲಾ. ನನಗೆ ಪೊಲೀಸರು ಕರೆಸಿಲ್ಲಾ ಮತ್ತು ನಾನು ಅವರ ಜೊತೆಗೆ ಘಟನಾ ಸ್ಥಳಕ್ಕೆ ಹೋಗಿಲ್ಲಾ ಮತ್ತು ಅಲ್ಲಿ ಯಾವುದೇ ಕಾರಿನಲ್ಲಿ ಆರೋಪಿತರು ಬಂದಿಲ್ಲಾ ಮತ್ತು ಸದರಿ ಕಾರಿನಿಂದ ಯಾವುದೇ ಗಾಂಜಾ ಸಿಕ್ಕಿಲ್ಲಾ ಮತ್ತು ಅದನ್ನು ನಾನು ತೂಕ ಮಾಡಿಲ್ಲಾ ಮತ್ತು ಸ್ಯಾಂಪಲ್ ತೆಗೆದಿಲ್ಲಾಮತ್ತು ಬರೆದಿಟ್ಟ ಪಂಚನಾಮೆಗೆ ಸಹಿ ಮಾಡಿ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂತಾ ಅನ್ನುವುದು ಸರಿ ಅಲ್ಲಾ.

*2 ನೇ ಆರೋಪಿತನ ಪರ ವಕೀಲರು ಮೇಲ್ಕಂಡ ಪಾಟೀ ಸವಾಲು ಅನುಕರಿಸುತ್ತೇನೆ ಎಂದು ತಿಳಿಸಿದ್ದು ಅವರಿಗೆ ಅನುಮತಿ ನೀಡಲಾಯಿತು.*

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಸವಕಲ್ಯಾಣ. ಜಿಃ ಬೀದರ .